ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

16

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE : 15/3/21

## ಸೀಡಿ ಸಂತ್ರಸ್ತೆಗೆ ತಂದೆಯ ಊರಲ್ಲಿ ಜನರ ಬೆಂಬಲ

ಬಾಗಲಕೋಟೆ: ಮಾಜಿ ಸಚಿವರ ಸಿ.ಡಿ.ಪ್ರಕರಣದ ಸಂತ್ರಸ್ತ ಯುವತಿ ತನಗೆ ರಕ್ಷಣೆ ಇಲ್ಲ ಎಂದು ವಿಡಿಯೋ ಹೇಳಿಕೆ ನೀಡಿದ ಬೆನ್ನಲ್ಲೇ ಆಕೆಯ ತಂದೆಯ ಊರಾದ ಗುಡೂರ ಗ್ರಾಮದಲ್ಲಿ ಗ್ರಾಮಸ್ಥರಿಂದ ಬೆಂಬಲ ವ್ಯಕ್ತವಾಗಿದೆ. ಯುವತಿ ಮತ್ತು ಆಕೆಯ ಕುಟುಂಬಸ್ಥರು ಜೀವಕ್ಕೆ ಅಪಾಯ ಮಾಡಿಕೊಳ್ಳಬಾರದು. ಜೀವಕ್ಕೆ ತೊಂದರೆ ಮಾಡಿಕೊಂಡರೆ ಪ್ರಕರಣದಲ್ಲಿ ನ್ಯಾಯ ಸಿಗುವುದಿಲ್ಲ. ಏನಾದರೂ ಸಮಸ್ಯೆಯಾದರೆ ಗ್ರಾಮಸ್ಥರನ್ನು ಸಂಪರ್ಕಿಸಿ ಎಂದು ಸಾಮಾಜಿಕ ಕಾರ್ಯಕರ್ತೆ ಸದನಾ ಅಂಗಡಿ ಹೇಳಿದ್ದಾರೆ. ಗುಡೂರ ಗ್ರಾಮದಲ್ಲಿ ಸದ್ಯ ಯುವತಿಯ 80 ವರ್ಷದ ಅಜ್ಜಿ ಮಾತ್ರ ಇದ್ದಾರೆ. ಸಿ.ಡಿ.ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು ಒಮ್ಮೆ ಆಕೆಯ ಮನೆಗೆ ಹೋಗಿ ವಿಚಾರಣೆ ನಡೆಸಿದ್ದಾರೆ.

## ನನ್ನ ಮಗ ಮುಗ್ಧ: ಭಾಲ್ಕಿ ಯುವಕನ ತಾಯಿ ಕಣ್ಣೀರು

ಬೀದರ್: ನನ್ನ ಮಗ ಅಮಾಯಕ, ಅವನದ್ದೇನೂ ತಪ್ಪಿಲ್ಲ. ಸೀಡಿ ಪ್ರಕರಣದಲ್ಲಿರುವ ಯುವತಿಯೊಂದಿಗೆ ಗೆಳೆತನ ಹೊಂದಿದ್ದನಷ್ಟೇ ಮತ್ತೇನಿಲ್ಲ. ಆಕೆಯೇ ಅವನಿಗೆ ಉದ್ಯೋಗ ಕೊಡಿಸಿದ್ದಳು. ವಿಡಿಯೋ ಜಾಹೀರಾತು ಮಾಡಿಕೊಂಡಿದ್ದ ನನ್ನ ಮಗನನ್ನು ಭಾಲ್ಕಿಯಿಂದ ಏಕಾಏಕಿ ಕರೆದೊಯ್ಯಲಾಗಿದೆ. ಮಾಜಿ ಸಚಿವರ ಸಿಡಿ ಪ್ರಕರಣಕ್ಕೆ ಸಂಬಂಧಿಸಿ ಭಾಲ್ಕಿಯಿಂದ ಎಸ್‌ಐಟಿ ತಂಡ ವಿಚಾರಣೆಗೆ ಕರೆದೊಯ್ದಿರುವ ಯುವಕನ ತಾಯಿ ಸಂಪಮ್ಮ ಇದು ತಮ್ಮನ್ನು ಭೇಟಿಯಾದ ಮಾಧ್ಯಮಗಳ ಮುಂದೆ ಅವಲತ್ತುಕೊಂಡದ್ದು ಹೀಗೆ. ಮಾ.11 ರಂದು ಎಸ್‌ಐಟಿ ತಂಡ ಇಬ್ಬರು ಯುವಕರನ್ನು ವಿಚಾರಣೆ ಗೆಂದು ಬೆಂಗಳೂರಿಗೆ ಕರೆದೊಯ್ದಿದ್ದರು.